ಮಹಡಿ ಮೆಟ್ಟಿಲುಗಳಲ್ಲಿ ಹೆಜ್ಜೆ ಹಾಕಿದೆ. ಮೊದಲ ಅಂತಸ್ತಿಗೆ ಬಂದಾಗ, ಗಟ್ಟಿಯಾಗಿ ಮೇಲಿನಿಂದ ಕಿರುಚಿದ್ದು ಕೇಳಿಸಿತು, 'ಸಾಬ್ ಬಂದಿದ್ದಾರೆ!' ತಲೆಯೆತ್ತಿ ನೋಡಿದಾಗ ಸೆಕ್ಯುರಿಟಿಯವ ಕಂಡ. ತಕ್ಷಣ ಓಡಿದೆ. ಬೈಕಿನ ಬಳಿ ಬಂದಾಗ, ಪೊಲೀಸರು ಗೇಟಿನ ಬಳಿಯಿದ್ದರು. ಬೈಕ್ ಏರಿ, ದೌಡಾಯಿಸಿದೆ. ಪೊಲೀಸ್ ಜೀಪು ಹಿಂಬಾಲಿಸಿ ಬರುತ್ತಿತ್ತು. ಬಿರುಗಾಳಿಯಂತೆ ಬೈಕ್ ಚಲಾಯಿಸಿ, ಸುಮಾರು ಮುಕ್ಕಾಲು ತಾಸಿನಲ್ಲಿ, ಪೊಲೀಸರ ದಿಕ್ಕು ತಪ್ಪಿಸುವುದರಲ್ಲಿ ಸಫಲನಾದೆ. ಯಾವುದೋ ಗಲ್ಲಿಯಲ್ಲಿ ಒಂದು ತಾಸು ಕಳೆದೆ. ಆಗ ನಿಮ್ಮ ನೆನಪಾಯಿತು. ಆದರೂ ಭಯ. ಗಂಟೆ ಒಂದು ಕಳೆದ ಮೇಲಷ್ಟೇ ಇಲ್ಲಿಗೆ ಬರುವ ಧೈರ್ಯ ಮಾಡಿದೆ. ದಯವಿಟ್ಟು ನನಗೆ ಸಹಾಯ ಮಾಡಿ.'

'ಸೆಕ್ಷನ್ 302 ಅಥವಾ 306! ಕೊಲೆ ಅಥವಾ ಆತ್ಮಹತ್ಯೆಗೆ ಪ್ರಚೋದನೆ! ಮೊದಲನೆಯದ್ದಾದರೆ ಜಾಮೀನೂ ಸಿಗದು. ಸದ್ಯ ಪೊಲೀಸರಿಗೆ ಶರಣಾಗದೆ ನಿನಗೆ ಬೇರೆ ದಾರಿಯಿಲ್ಲ. ಖಂಡಿತಾ ನಿನಗೆ ಸಹಾಯ ಮಾಡೋಣ. ಈಗ ನಾನು ಪೊಲೀಸರಿಗೆ ಕರೆ ಮಾಡದೇ ವಿಧಿಯಿಲ್ಲ' ಕರಮಚಂದನ ಮಾತು ಕೇಳಿ, ಆತನ ಮೊಗ ಬಿಳುಚಿತು.

'ನಾನು ಜೈಲಿನೊಳಗಿದ್ದರೆ ತನಿಖೆಯ ಗತಿಯೇನು?'

'ಚಿಂತಿಸಬೇಡ. ಅಗತ್ಯವಿದ್ದಲ್ಲಿ, ನಿನ್ನನ್ನು ಭೇಟಿಯಾಗುವುದು ಕಷ್ಟವೇನಲ್ಲ' ತಮ್ಮಯ್ಯ ತೃಪ್ತನಾದ. ಕರಮಚಂದ, ಇನ್‌ಸ್ಪೆಕ್ಟರ್ ಡಿಸೋಜನಿಗೆ ಕರೆ ಮಾಡಿದ. ತುಸು ಹೊತ್ತಿನಲ್ಲಿ ಕೆಲ ಪೇದೆಗಳೊಂದಿಗೆ ಡಿಸೋಜ ಹಾಜರಾದ. 'ಧನ್ಯವಾದಗಳು. ನಮ್ಮ ಕೆಲಸ ಕಡಿಮೆ ಮಾಡಿದಿರಿ. ಈ ಕೊಲೆಗಾರ ನಿಮ್ಮಲ್ಲೇಕೆ ಬಂದ?' ಡಿಸೋಜನ ಗೊಂದಲ.

'ಪ್ರವೀಣ ಆತ್ಮಹತ್ಯೆ ಮಾಡಿಕೊಂಡ, ತಾನು ಆತನನ್ನು ತಳ್ಳಿದ್ದಲ್ಲ ಅಂತ ತಮ್ಮಯ್ಯನ ಹೇಳಿಕೆ. ಅವನನ್ನು ನಂಬಿ, ನಾನು ತನಿಖೆಗೆ ಒಪ್ಪಿಕೊಂಡಿದ್ದೇನೆ.'

'ನನಗನ್ನಿಸುತ್ತೆ ನೀವು ನಿಮ್ಮ ಸಮಯ ಹಾಳು ಮಾಡಿಕೊಳ್ಳುತ್ತಿದ್ದೀರಿ. ನಮ್ಮ ಪ್ರಾಥಮಿಕ ತನಿಖೆಯಲ್ಲಿ ಈತನ ವಿರುದ್ಧ ಸಾಕಷ್ಟು ಪುರಾವೆಗಳು ಸಿಕ್ಕಿವೆ. ಇವರಿಬ್ಬರ ನಡುವಿನ ವೈಮನಸ್ಯ, ಕೊಲೆ ಮಾಡುವೆನೆಂದು ಹಾಕಿದ ಧಮಕಿ, ಈ ರಾತ್ರಿ ತನ್ನ ಮನೆಯ ತಾರಸಿಗೆ ಬರುವಂತೆ ಈತ ಕಳಿಸಿದ ಸಂದೇಶ...'

'ಸುಳ್ಳು! ತಾರಸಿಗೆ ಬರಲು ಅವ್ನೇ ನನ್ಗೆ ಹೇಳಿದ್ದು!' ತಮ್ಮಯ್ಯ ಚೀರಿದ.

'ತಮ್ಮಯ್ಯ, ಗಾಬರಿಯಾಗಬೇಡ. ಸಾಹೇಬರು ಹೇಳಿದ್ದೇನು ಅಂತಿಮವಲ್ಲ. ನಾವು ತನಿಖೆ ಮಾಡೋಣ.'

'ಸಾರ್, ದಮ್ಮಯ್ಯ! ನನ್ನ ಕೈಬಿಡಬೇಡಿ.'

'ಈಗ ನಮ್ ಜೊತೆ ನಡಿ' ಡಿಸೋಜ ದರ್ಪದಿಂದ ಹೇಳಿದ.

* * *

ಮಾರನೆಯ ದಿನ ಬೆಳಿಗ್ಗೆ ಏಳರ ಹೊತ್ತಿಗೇ ಕಾವೇರಿ ವಸತಿ ಸಂಕೀರ್ಣದಲ್ಲಿ ತನಿಖೆ ಆರಂಭ. ವಿಳಂಬವಾದಷ್ಟೂ ಅಲ್ಲಿದ್ದ ಕುರುಹುಗಳು ನಾಶವಾಗಬಹುದೆಂಬ ಭಯವದಕ್ಕೆ ಕಾರಣ. ದೇಹ ಬಿದ್ದ ಜಾಗದ ಸುತ್ತ ಪೊಲೀಸರು ಟೇಪ್‌ನ ಬ್ಯಾರಿಕೇಡ್ ಹಾಕಿದ್ದರು. ಹರಡಿದ ಒಣ ರಕ್ತದ ಕಮಟು ವಾಸನೆ. ಕೂಲಂಕಷವಾಗಿ ಪರಿಶೀಲಿಸಿದರೂ, ಪ್ರತಿಫಲವೇನೂ ಸಿಗಲಿಲ್ಲ. ತದನಂತರ ನಮ್ಮ ಗಮನ ತಾರಸಿಯತ್ತ.

ತಾರಸಿಯಿಂದ ಪ್ರವೀಣ ಕೆಳಕ್ಕೆ ಬಿದ್ದ ಜಾಗಕ್ಕೆ ಚಾಕ್ ಪೀಸಿನಿಂದ ವೃತ್ತಾಕಾರವಾಗಿ ಗುರುತು ಮಾಡಿದ್ದರು. ತಾರಸಿಯ ಕಟಕಟೆಯಿಂದ ಬಗ್ಗಿ ನೇರವಾಗಿ ಇಣುಕಿದಾಗ, ಕೆಳಗಡೆ ದೇಹ ಬಿದ್ದಿದ್ದ ಜಾಗ ಕಾಣಿಸಿತು. ಕರಮಚಂದ ಜೇಬಿನಿಂದ ಬೈನಾಕ್ಯುಲರ್ ತೆಗೆದು, ಮೆಲ್ಲಗೆ ಬಲಕ್ಕೆ ಸರಿಯುತ್ತಾ ನಿರುಕಿಸಿದವನು, ಉದ್ಗಾರ ತೆಗೆದ, 'ಬಿದ್ದಪ್ಪ, ಪ್ರವೀಣ ಸಾಯುವ ಕ್ಷಣದಲ್ಲಿ ನಿಂತಿದ್ದ ಜಾಗ ಇದಲ್ಲ! ಪೊಲೀಸರು ತಪ್ಪಾಗಿ ಗುರುತು ಹಾಕಿದ್ದಾರೆ!'

'ಯಾಕೆ ಹಾಗನ್ನುತ್ತೀ?'

'ಇಲ್ಲಿ ನೋಡು, ಈ ಮನೆಯ ಬಾಲ್ಕನಿಯ ಛಾವಣಿಯ ಅಂಚಿನಲ್ಲಿ ರಕ್ತದ ಕಲೆ! ಪ್ರವೀಣ ಧುಮುಕುವಾಗ ಆತನ ದೇಹ ಅದಕ್ಕೆ ಘಟ್ಟಿಸಿ, ಬಲಕ್ಕೆ ಚಿಮ್ಮಿ, ಕೆಳಗೆ ಬಿದ್ದಿದೆ. ಹಾಗಾಗಿ ಇಲ್ಲಿ ರಕ್ತದ ಕಲೆ ಮೂಡಿದೆ. ಅಂದರೆ, ಪ್ರವೀಣ ಕೆಳಗೆ ಬೀಳುವ ಕ್ಷಣದಲ್ಲಿ ನಿಂತಿದ್ದ ಜಾಗ ಇದಾಗಿರಬೇಕಲ್ಲವೇ!' ನಾನು ಕೆಳಗೆ ಇಣುಕಲು ಹವಣಿಸಿದಾಗ ಕರಮಚಂದ ಎಚ್ಚರಿಸಿದ, 'ಕಟಕಟೆಗೆ ಒರಗಬೇಡ. ಪ್ಯಾಂಟಿಗೆ ದೂಳು ಮೆತ್ತುತ್ತದೆ.'

'ಇಲ್ಲಿ ದೂಳು ಅಳಿಸಿ ಹೋಗಿದೆ!'